# ಕಟಿಯಲ್ಲಿ ಕರವಿಟ್ಟನು ಪಂಡರಿರಾಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 165.
2. **Note:** Singer has followed lyrics given in yellow highlights.
3. **Note:** Lyrics given without highlights are as per Ref. 1. The wordings given in yellow highlights are as per the singer and are almost similar to Ref. 1. But few differences are there. Hence, they are given separately in yellow highlights. These wordings given in yellow highlights seem to be more apt.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

| | |
|---|---|
| ರಾಗ: ತೋಡಿ ತಾಳ: ಛಾಪು | ರಾಗ: ತೋಡಿ ತಾಳ: ಛಾಪು |
| | |
| ಕಟಿಯಲ್ಲಿ ಕರವಿಟ್ಟನು ಪಂಢರಿರಾಯ | ಕಟಿಯಲ್ಲಿ ಕರವಿಟ್ಟನು ಜಗದೀಶನು |
| ಕಟಿಯಲ್ಲಿ ಕರವಿಟ್ಟನೊ ‖ ಪ ‖ | ಕಟಿಯಲ್ಲಿ ಕರವಿಟ್ಟನೊ |
| | |
| ರಾಜಸೂಯ ಯಾಗದಲ್ಲಿ ರಾಜೇಶ್ವರ | ರಾಜಸೂಯ ಯಾಗದಲ್ಲಿ ರಾಜೇಶ್ವರ |
| ರಾಜರು ಮೊದಲಾದ ಸುರರೆಲ್ಲರು | ರಾಜರು ಮೊದಲಾದ ಸುರರೆಲ್ಲರು |
| ಭೋಜನವನ್ನ ಮಾಡಿದೆಂಜಲು ಮೊದಲಾದ್ದು | ಭೋಜನವನ್ನ ಮಾಡಿದೆಂಜಲು ಮೊದಲಾದ್ದು |
| ರಾಜೀವಾಕ್ಷನು ಎತ್ತಿದಾಯಾಸದಿಂದಲೋ ‖ ೧ ‖ | ರಾಜೀವಾಕ್ಷನು ಎತ್ತಿದಾಯಾಸದಿಂದಲೋ |
| | |
| ಗೊಲ್ಲ ಬಾಲಕರೊಡಗೂಡಿ ತಾ ಬಂದು | ಗೊಲ್ಲ ಬಾಲಕರೊಡಗೂಡಿ ತಾ ಬಂದು |
| ಗೊಲ್ಲತಿಯರ ಮನೆ ಪೊಕ್ಕು ಬೆಣ್ಣೆಯ ತಿಂದು | ಗೊಲ್ಲತಿಯರ ಮನೆ ಪೊಕ್ಕು ಬೆಣ್ಣೆಯ ತಿಂದು |
| ಬಲ್ಲಿದ ತೃಣಾವರ್ತ ಮೊದಲಾದ ಅಸುರರ | ಬಲ್ಲಿದ ತೃಣಾವರ್ತ ಮೊದಲಾದ ಅಸುರರನ್ನು |
| ಮೆಲ್ಲನೆ ಕೊಂದ ಆಯಾಸದಿಂದಲೊ ‖ ೨ ‖ | ಎಲ್ಲರನ್ನು ಕೊಂದ ಆಯಾಸದಿಂದಲೊ |
| | |
| ಧರಣಿಯನು ತಂದ ದನುಜ ಹಿರಣ್ಯಕನ | ಧಾರಿಣಿಯನು ತಂದ ದನುಜ ಹಿರಣ್ಯಕನ |
| ಕೋರೆದಾಡೆಯಿಂದ ಸೀಳಿದರಿಂದಲೊ | ಕೋರೆದಾಡೆಯಿಂದ ಸೀಳಿದರಿಂದಲೊ |
| ವಾರಿಜಮುಖಿ ಸರ್ವಕಾಲದಲಿ ನಿಂತು | ವಾರಿಜಮುಖಿ ಸರ್ವಕಾಲದಲಿ ನಿಂತು |
| ಸೇರಿ ಸುರತ ಮಾಡಿದಾಯಾಸದಿಂದಲೊ ‖ ೩ ‖ | ಸೇರಿ ಸುರತ ಮಾಡಿದಾಯಾಸದಿಂದಲೊ |
| | |
| ಸುರಪ ತನಯಗೆ ಸಾರಥ್ಯವನೆ ಮಾಡಿ | ಸುರಪ ತನಯಗೆ ಸಾರಥ್ಯವನೆ ಮಾಡಿ |

| | |
|---|---|
| ಭರದಿಂದ ಚಕ್ರವ ಪಿಡಿದರಿಂದಲೊ | ಭರದಿಂದ ಚಕ್ರ ಪಿಡಿದರಿಂದಲೊ |
| ಪರಿಪರಿ ವಿಧದಿಂದ ಕುದುರೆಗಳನೆ ತೊಳೆದು | ಪರಿಪರಿ ವಿಧದಿಂದ ಕುದುರೆಗಳನೆ ತೊಳೆದು |
| ಪರಿಪರಿ ಕೆಲಸ ಮಾಡಿದ ಆಯಾಸದಿಂದಲೊ ‖ ೪ ‖ | ಪರಿಪರಿ ಕೆಲಸದ ಆಯಾಸದಿಂದಲೊ |
| | |
| ಮುದದಿಂದ ವ್ರಜದ ಹದಿನಾರು ಸಾವಿರ | ಮುದದಿಂದ ವ್ರಜದ ಹದಿನಾರು ಸಾವಿರ |
| ಸುದತಿಯರಾಳಿದ ಮದದಿಂದಲೊ | ವನಿತೆಯರಾಳಿದ ಮದದಿಂದಲೊ |
| ಮದಗಜ ಗಮನೇರ ಮಧುರಾಂತಕ ಕೃಷ್ಣ | ಮದಗಜಗಮನೇರ ಮಧುರಾಂತಕನ |
| ಒದಗಿ ಮಾವನ ಕೊಂದ ಆಯಾಸದಿಂದಲೊ ‖ ೫ ‖ | ಒದಗಿ ಮಾವನ ಕೊಂದ ಆಯಾಸದಿಂದಲೊ |
| | |
| ಪ್ರೇಮದಿಂದಲಿ ಬಂದ ಭಕ್ತರು ನಿಮ್ಮ ಚರಣ | ಮಮತೆಯಿಂದಲಿ ಭಕ್ತಜನರು ನಿಮ್ಮ ಚರಣ |
| ಕಮಲಯುಗ್ಮವ ಮುಟ್ಟಿ ಭಜಿಸುತಿರೆ | ಕಮಲ ಯುಗವನು ಸ್ತುತಿಸುತಿರಲು |
| ಮಮತೆಯಿಂದಲಿ ಅವರ ಭವವ ಕಳೆವೆನೆಂದು | ಮಮತೆಯಿಂದಲಿ ಬಂದು ಅಭಯಗಳನೆ ಕೊಟ್ಟು |
| ಕಮಲನಾಭ ಶ್ರೀ ಪುರಂದರ ವಿಠಲನು ‖ ೬ ‖ | ಕಮಲನಾಭ ಶ್ರೀ ಪುರಂದರ ವಿಠಲ |

**Classification:** Keerthane

**Ankita:** sri purandara vittala

**Location:** NA

**Category:** Vishnu Stuti

**Sub-Category:** Kai, Vishnu, yaga, arasa, sura, oota, benne, asura, bhumi, chakra, kudure, hengasu, gaja, Krishna, kamsa, prema, padma, bhajane, bhava, bhaya, jana,

**Pravachana:** NA

**Explanation:** NA